

ಹೊಳೆದಿತ್ತೇನೋ ಅವಳಿಗೆ. ಅವನ ಕಣ್ಣುಗಳಲ್ಲಂತೂ ಹೊಗೆ ಎದ್ದು, ಹಾರುತ್ತಿದೆ ಅನ್ನುವಂತಾಗಿತ್ತು. ಶ್ಯಾಮಣ್ಣನ ಕಣ್ಣೊಳಗಿನ ಅನುಮಾನದ ದೃಷ್ಟಿ ವೈಶಾಲಿಯ ಮುಖಕ್ಕೆ ರಾಚಿತ್ತು. ಆದರೂ ಅವಳ ಒಟಗುಟ್ಟುವಿಕೆ ನಿಂತಿರಲಿಲ್ಲ. 'ಹುಂ ನಿಂತ್ರೆಲಾ, ನೀರ ಕಾದ ಬೆಂಕಿ ಆಗ್ಯಾವು, ನೀರ ತೋಡಕೊಂಡು ಜಳಕ ಮಾಡ ಬರ್ರಿ' ಅನ್ನುತ್ತಲೇ ಒಳಗೆ ಹೋದಳು. ಶ್ಯಾಮಣ್ಣನಿಗೆ ಏನೊಂದು ತಿಳೀತೋ? ತಿಳಿಲಿಲ್ಲೋ? ಅವನು ಒಂದು ಕ್ಷಣ ನಿಂತ ಹಾಗೇ ನಿಂತಿದ್ದ. ಒಳಗೆ ಹೋಗುವಾಗ ಬಾಲ್ಕನಿಯ ಕಡೆ ನೋಡಿದ. ತಿಮ್ಮಣ್ಣ ಮೊದಲಿನಂತೆಯೇ ನೆಲದ ಮೇಲೆ ಹೂ ಅರಳಿದಂಗಿದ್ದ ರಂಗೋಲಿಯತ್ತಲೇ ಮುಖ ಮಾಡಿ ನಿಂತಿದ್ದ. ಮರುಕ್ಷಣದಲ್ಲಿ ಶ್ಯಾಮಣ್ಣನೊಳಗೆ ನಿರ್ಲಿಪ್ತತೆಯೊಂದರ ಎಳೆ ಒಳಗಿಳಿದಂತಾಯಿತು. ಲಪಾಟಿ ಮೇಲೆ ಎತ್ತಿ ಕಟ್ಟಿಕೊಳ್ಳುತ್ತಲೇ ಬಚ್ಚಲ ಖೋಲಿಯತ್ತ ನಡೆದ. ವೈಶಾಲಿ 'ಜಳಕ ಮಾಡಿದ್ರೋ ಇಲ್ಲೋ, ಬರೇ ಇದ ಕಥಿಯಾಗ ಎಲ್ಲೇ ಮಣ್ಣಾಕ್ಕೈತೇನೋ ನನ್ನ ಜೀವ'ಅಂತಾ ಬಡಬಡಿಸತೊಡಗಿದ್ದು ಮೆತ್ತಗೆ ಕೇಳತೊಡಗಿತ್ತು. ಮಾರನೇ ದಿನದಿಂದಲೇ ರಂಗೋಲಿ ಮತ್ತೆ ಬೇರೆ ಬೇರೆ ಕೆಲಸಕ್ಕೆ ಹೊರಗೆ ಬಂದಾಗಲೆಲ್ಲಾ